ಭಟ್ಟರ್ ಸ್ನ್ಯಾಕ್

- **ಮಂಜುನಾಥ ಹತ್ತರವಾಟ, ಕೊಳವಿ**
ಭಟ್ರೇ, ಮದುವೆ ಆದ ಹೊಸತರಲ್ಲಿ ಇದ್ದ ಉತ್ಸಾಹ, ಕೊನೆವರೆಗೂ ಯಾಕೆ ಇರುವುದಿಲ್ಲ?
- ಇದ್ದಿದ್ದರೆ ಪ್ರತಿ ರಾತ್ರಿಯೂ ಮೊದಲ ರಾತ್ರಿ, ಪ್ರತಿ ದಿನವೂ ಹನಿಮೂನ್!

- **ಸುಜಯ ಕೊಣ್ಣೂರ್ (ಇಮೇಲ್ ಮೂಲಕ)**
ಭಟ್ರೇ, ಕ್ಲಬ್ ಹೌಸಿನವರು ನಿಮಗೆ ಒಳ್ಳೆಯ ಕೇಳುಗ ಪ್ರಶಸ್ತಿ ಕೊಡಬಹುದಾ?
- ವಿಶ್ವವಾಣಿ ಕ್ಲಬ್ ನಲ್ಲಿ ಮೊದಲ ಸಾಲಿನಲ್ಲಿರುವವರು ವಿರೋಧಿಸಬಹುದು!

- **ಸಂತೋಷ ಪಾಟೀಲ್, ಬ್ಯಾಡಗಿ**
ಭಟ್ರೇ, ಹೆಂಗಸರು ಮಾತಾಡುವುದನ್ನು ನಿಲ್ಲಿಸಿದರೆ ಏನಾಗಬಹುದು?
- ಇಷ್ಟು ಬೇಗ ಹಾಗೆ ಆಗುವುದಿಲ್ಲ!

- **ಎಸ್.ರಮೇಶ್ ಬರ್ಕಲಿ, ಕಿರಗಂದೂರು**
ಭಟ್ರೇ, ಗೋಸುಂಬೆಗಳಿಗೂ, ರಾಜಕಾರಣಿಗಳಿಗೂ ಏನು ವ್ಯತ್ಯಾಸ?
- ಗೋಸುಂಬೆಗಳು ದಿನದಲ್ಲಿ ನಾಲ್ಕು ಸಲ ಮಾತ್ರ ಬಣ್ಣ ಬದಲಿಸುತ್ತವೆ ಅಷ್ಟೇ !

- **ವಿ.ಹೇಮಂತ ಕುಮಾರ, ಬೆಂಗಳೂರು**
ಭಟ್ರೇ, ವಾರ ಭವಿಷ್ಯದಲ್ಲಿ ಹೆಂಡತಿಯಿಂದ ಶುಭ ಸಮಾಚಾರ ಅಂತಿದೆಯಲ್ಲ?
- ಇದು ಯಾರ ಹೆಂಡತಿ ಎಂಬುದನ್ನು ಖಾತ್ರಿಪಡಿಸಿಕೊಳ್ಳಬಾರದೇ?!

- **ವಾದಿರಾಜ ದಂಡಿನ, (ಇಮೇಲ್ ಮೂಲಕ)**
ಭಟ್ರೇ, ಮನೆಯಲ್ಲಿ ಶಾಂತಿ ನೆಲೆಸಲು ಏನು ಮಾಡಬೇಕು?
- ಡಿಸ್ಕೊ ಶಾಂತಿ ಮನಃಸ್ಥಿತಿ ಬಿಡಬೇಕು!

- **ವಿಜಯಕುಮಾರ್ ಎಚ್. ಕೆ. ರಾಯಚೂರು**
ಕಸಾಪ ಚುನಾವಣೆಗೆ ನೀವೇಕೆ ಸ್ಪರ್ಧಿಸಲಿಲ್ಲ, ಭಟ್ರೇ ?
- ಮತದಾರರಗಿಂತ ಸ್ಪರ್ಧಿಗಳೇ ಜಾಸ್ತಿಯಾಗಬಹುದು ಅನಿಸಿದ್ದರಿಂದ!

- **ವೃಷಭೇಂದ್ರ, ಸಕಲೇಶಪುರ**
ಕರಾಟೆ ಕಲಿತ ಹುಡುಗಿಯನ್ನು ಮದುವೆಯಾಗಬಹುದಾ?
- ಬೇರೆ ಗಂಡಸರು ಸಿಗದಿದ್ದರೆ ಆಗಬಹುದು!

- **ಜಯಂತ ಹೆಗಡೆ, ಬೆಂಗಳೂರು**
ಭಟ್ರೇ, ಸುಮ್ಮನಿರಲಾರದೇ ಇರುವೆ ಬಿಟ್ಟುಕೊಳ್ಳುವುದು ಅಂದ್ರೆ ಏನು?
- ಹೆಂಡತಿ ಮುಂದೆ ಪಕ್ಕದ ಮನೆ ಆಂಟಿ ಹೊಗಳಿ ನೋಡು, ಗೊತ್ತಾಗುತ್ತದೆ !

- **ನಾಗರತ್ನ ಜಯಪ್ಪ, ಹಳೇಬೀಡು**
ಭಟ್ರೇ, ಹೆಂಗಸರ ಯಾವ ಕಾಯಿಲೆ ನಿಮಗೆ ಇಷ್ಟ?
- ನಿದ್ದೆಯಲ್ಲಿ ನಡೆಯುವ ಕಾಯಿಲೆಯಿದೆ ಎಂದು ಬೆಡ್ ರೂಮ್‌ಗೆ ಬರ್ತಾರಲ್ಲ ಅದು!

ಕಾಯಿದೆ ವಾಪಸು; ನಿಜವಾಗಿ ಸೋತವ ರೈತ!

130 ಕೋಟಿ ಜನರ ದೇಶದಲ್ಲಿ ಶೇ. 50ಕ್ಕಿಂತ ಹೆಚ್ಚು ಕೃಷಿ ಅವಲಂಬಿಸಿರುವಾಗ ಕಾಲಕಾಲಕ್ಕೆ ಸುಧಾರಣೆಯಾಗದೇ ಅನ್ನದಾತ ಸಂಕಷ್ಟ ಬಗೆಹರಿಯುವುದು ದುಸ್ತರ. ಹಿಡಿಯಷ್ಟು ಜನರ ಮತ್ತು ಅಧಿಕಾರ ವಂಚಿತರ ಸ್ವಾರ್ಥಕ್ಕೆ ರೈತನನ್ನು ದಾಳವಾಗಿ ಬಳಸಿಕೊಂಡಿದ್ದಾರೆ. ನಿಜಕ್ಕೂ ಇವರು ರೈತ ವಿರೋಧಿಗಳಲ್ಲವೇ?

ಸಕಾಲಿಕ

ಪ್ರಕಾಶ್ ಶೇಷರಾಘವಾಚಾರ್

vveditoped@gmail.com

ಪಿ.ವಿ.ನರಸಿಂಹರಾವ್ ಅವರು 1991ರಲ್ಲಿ ಪ್ರಧಾನಿಯಾಗಿದ್ದಾಗ ಆರ್ಥಿಕ ಸುಧಾರಣೆ ಕೈಗೊಳ್ಳದಿದ್ದರೆ ಭಾರತ ಇಂದಿಗೂ ಹಿಂದುಳಿದ ರಾಷ್ಟ್ರಗಳ ಪಟ್ಟಿಯಲ್ಲಿಯೇ ಇರುತ್ತಿತ್ತೇನೊ?

89ರಿಂದ ಸತತವಾದ ಅತಂತ್ರ ಸರ್ಕಾರಗಳಿಂದ ದೇಶ ನಲುಗಿ ಹೋಗಿತ್ತು. ಆರ್ಥಿಕ ಪರಿಸ್ಥಿತಿಯು ದಿವಾಳಿಯಂಚಿಗೆ ತಲುಪಿತ್ತು. Balance of Payment ಸಮಸ್ಯೆ ಗಂಭೀರವಾಗಿತ್ತು. ದೇಶದಲ್ಲಿ ಎರಡು ವಾರಗಳಿಗೆ ಮಾತ್ರ ಆಮದಿಗೆ ವಿದೇಶಿ ವಿನಿಮಯ ಲಭ್ಯವಿದ್ದಿದ್ದು. ಯಾವುದೇ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಭಾರತಕ್ಕೆ ಸಾಲ ನೀಡಲು ಸಿದ್ಧವಿರಲಿಲ್ಲ. ಪರಿಸ್ಥಿತಿಯ ತುರ್ತು ನಿರ್ವಹಣೆಗೆ ದೇಶದ 67 ಟನ್ ಚಿನ್ನವನ್ನು ವಿದೇಶಿ ಬ್ಯಾಂಕ್‌ಗಳಲ್ಲಿ ಅಡವಿಡಬೇಕಾದ ಶೋಚನೀಯ ಪರಿಸ್ಥಿತಿಗೆ ಭಾರತ ತಲುಪಿತ್ತು.

ಆರ್ಥಿಕ ಸಂಕಷ್ಟದಿಂದ ಪಾರಾಗಲು 1991ರಲ್ಲಿ ಪಿ.ವಿ.ನರಸಿಂಹರಾವ್, ಆರ್ಥಿಕ ಉದಾರೀಕರಣ ನೀತಿಯನ್ನು ದಿಟ್ಟತನದಿಂದ ಜಾರಿಗೆ ತಂದರು. ಒಮ್ಮೆಗೆ ದೇಶದಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ಕೆಂಪುಗಂಬಳಿಯನ್ನು ಹಾಸಲಾಯಿತು. ಖಾಸಗಿ ಬಂಡವಾಳ ಸ್ನೇಹಿ ನೀತಿ ಬಂದಿತು. ಹಲವಾರು ಕ್ಷೇತ್ರಗಳು ಖಾಸಗಿಯವರಿಗೆ ತೆರೆದುಕೊಂಡಿತು. ಕೇಂದ್ರದ ಈ ಉದಾರೀಕರಣ ನೀತಿಯನ್ನು ಅಂದಿನ ಪ್ರತಿ ಪಕ್ಷಗಳು ತೀವ್ರ ವಿರೋಧಿಸಿದ್ದವು. ದೇಶವನ್ನು ಖಾಸಗಿ ಸಂಸ್ಥೆಗಳಿಗೆ ಮಾರಲಾಗುತ್ತಿದೆ, ವಿದೇಶಿ ಬಂಡವಾಳಕ್ಕೆ ಅನುಮತಿ ನೀಡಿ ಭಾರತೀಯ ಉದ್ದಿಮೆಗಳ ಚರಮಗೀತೆ ಹಾಡಲಾಗುತ್ತಿದೆ, ಹೊಸ ರೂಪದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಹಿಂಬಾಗಿಲಿನಿಂದ ಪ್ರವೇಶಿಸುತ್ತಿದೆ ಎಂಬಿತ್ಯಾದಿ ಟೀಕೆಗಳು ಬಿಜೆಪಿ ಸೇರಿ ಲ್ಲರಿಂದ ವ್ಯಕ್ತವಾಗಿತ್ತು.

ಅದಾಗಿ 30ವರ್ಷ ಕಳೆದಿವೆ. ಈ ಅವಧಿಯಲ್ಲಿ ಎಲ್ಲ ರಂಗದಲ್ಲಿಯೂ ಪ್ರಗತಿ ಸಾಧಿಸಿದ್ದೇವೆ. ಭಾರತೀಯ ಉದ್ದಿಮೆಗಳು ವಿದೇಶಿ ಬಂಡವಾಳದಿಂದ ಬಲವಾದುವೇ ವಿನಹ ಬಾಗಿಲು ಹಾಕಿಲ್ಲ. ಉದಾರೀಕರಣದ ಫಲವಾಗಿ ಭಾರತೀಯ ಬಹುರಾಷ್ಟ್ರೀಯ ಕಂಪನಿಗಳು ಬೆಳೆದಿವೆ. ಹರಿದು ಬಂದ ವಿದೇಶಿ ಬಂಡವಾಳದ ಕಾರಣ ಲಕ್ಷಾಂತರ ಉದ್ಯೋಗ ಸೃಷ್ಟಿಯಾಗಿ ಲಕ್ಷಾಂತರ ಕುಟುಂಬಗಳ ಆರ್ಥಿಕ ಸ್ಥಿತಿಯು ಸುಧಾರಿಸಿತು.

96ರ ನಂತರ ಬಂದ ಎಲ್ಲ ಸರಕಾರಗಳು ಆರ್ಥಿಕ ಉದಾರೀಕರಣಕ್ಕೆ ಒತ್ತು ನೀಡಿರುವುದೇ ಹೊರತು ಅದನ್ನು ಹಿಂಪಡೆಯಲಿಲ್ಲ. ವಾಜಪೇಯಿ ಸರ್ಕಾರದಲ್ಲಿ ಬಂಡವಾಳ ಹಿಂತೆಗತಕ್ಕೆ ಪ್ರತ್ಯೇಕ ಸಚಿವಾಲಯವನ್ನೆ ತೆರೆಯಲಾಗಿತ್ತು. ತತ್ಪರಿಣಾಮ ಸರ್ಕಾರದ ಹಲವಾರು ಬಿಳಿ ಆನೆ ಉದ್ದಿಮೆಗಳು ಮಾರಾಟವಾಗಿ ತೆರಿಗೆ ಹಣದ ಪೋಲಿಗೆ ತಡೆಯಾಯಿತು. 1991ರ ಆರ್ಥಿಕ ಉದಾರೀಕರಣದ ಲಾಭವು ಕೇವಲ ನಗರ ಪ್ರದೇಶಗಳಿಗೆ ಸಿಮೀತವಾಗಿತ್ತು. ಗ್ರಾಮೀಣ ಭಾರತ ಇದರಿಂದ ಪ್ರಯೋಜನ ಪಡೆಯಲಿಲ್ಲ. ಕೃಷಿ ಆಧಾರಿತ ಚಟುವಟಿಕೆಯ ಕೇಂದ್ರವಾಗಿದ್ದ ಹಳ್ಳಿಗಳಿಗೆ ಉದಾರೀಕರಣದ ಲಾಭವು ತಲುಪಲಿಲ್ಲ. ಕೃಷಿ ಕ್ಷೇತ್ರವು ಸುಧಾರಣೆಯಿಲ್ಲದೆ ಸೊರಗವುದು ಮುಂದುವರಿಯಿತು.

ಇಂದಿಗೂ ಬೆಳೆ ಕೈಕೊಟ್ಟು ಬೆಳದ ಬೆಳೆಗೆ ಸೂಕ್ತ ಬೆಲೆ ದೊರೆಯದೆ ಸಾಲದ ಶೂಲಕ್ಕೆ ಸಿಲುಕಿ ಲಕ್ಷಕ್ಕೆ ಶೇಕಡಾ 1.4 ರಿಂದ 1.8 ರೈತರು ದೇಶದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆಡಳಿತ ನಡೆಸುವ ಸರಕಾರಗಳಿಗೆ ಸಾಲಮನ್ನಾ ಬಡ್ಡಿ ಮನ್ನಾ, ತಾತ್ಕಾಲಿಕ ಪರಿಹಾರ ಧನ ಮತ್ತು ಬೆಂಬಲ ಬೆಲೆಗೆ ಒತ್ತಾಯಿಸುವುದು ಹೊರತು ಪಡಿಸಿ ಅವರ ಸಮಸ್ಯೆಗಳಿಗೆ ದೀರ್ಘಕಾಲೀನ ಪರಿಹಾರ ಕಂಡುಕೊಳ್ಳುವ ಚಿಂತನೆಯೇ ಇಲ್ಲ. ರೈತರ ಆದಾಯ ದ್ವಿಗುಣ ಮಾಡುವ ಬಿಜೆಪಿ ಸರಕಾಉದ ವಾಗ್ದಾನ ಹಾಲಿ ಪರಿಸ್ಥಿತಿಯಲ್ಲಿ ಕೈಗೂಡಲು ಆಮೂಲಾಗ್ರ ಬದಲಾವಣೆ ಬೇಕಾಗಿತ್ತು. ರೈತ ತನ್ನ ಬೆಳೆಯನ್ನು ಸ್ಪರ್ಧಾತ್ಮಕವಾಗಿ ಮಾರಾಟ ಮಾಡಲು APMC ಯಲ್ಲದೆ ನೇರವಾಗಿ ತನಗೆ ಹೆಚ್ಚಿನ ಬೆಲೆ ದೊರೆಯುವ ಕಡೆ ಮಾರಾಟ ಮಾಡುವುದಕ್ಕೆ ಅವಕಾಶ ಬೇಕಿತ್ತು. ಮಾರುಕಟ್ಟೆಯ ಅನಿಶ್ಚಿತತೆಯ ಅಪಾಯ ತಡೆಯಲು ಮಧ್ಯವರ್ತಿಗಳ ಹಾವಳಿ ಇಲ್ಲದೆ ಬಿತ್ತನೆಗೆ ಮುನ್ನವೇ ಪೂರ್ವನಿರ್ಧರಿತ ಬೆಲೆಯೊಂದಿಗೆ ಖರೀದಿದಾರನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಅವಕಾಶ ನೀಡಲಾಗಿತ್ತು. ಕೃಷಿ ಕ್ಷೇತ್ರದಲ್ಲಿ ಖಾಸಗಿ ಮತ್ತು ವಿದೇಶಿ ಬಂಡವಾಳ ಹೂಡಿಕೆ ಉತ್ತೇಜನ ನೀಡಲು ಕೃಷಿ ತಿದ್ದಪಡಿ ಕಾಯ್ದೆ ಜಾರಿಗೆ ತರಲಾಗಿತ್ತು.

ಆದರೆ ಇದರ ವಿರುದ್ಧ ನಡೆದ ಅಪ್ರಚಾರದಿಂದ ಇದೊಂದು ರೈತ ವಿರೋಧಿ ಕಾಯಿದೆ ಎಂದು ಬಿಂಬಿಸಲಾಯಿತು. ವಿಶೇಷವಾಗಿ ಪಂಜಾಬ್, ಹರ್ಯಾಣ ಮತ್ತು ಉತ್ತರಪ್ರದೇಶದ ಕೆಲವು ಭಾಗದ ರೈತರು ಕಾಯಿದೆ ವಿರೋಧಿಸಿ ಪ್ರಬಲವಾದ ಪ್ರತಿಭಟನೆ ಕೈಗೊಂಡರು. ಅಂತಿಮವಾಗಿ ಕೇಂದ್ರ ಸರ್ಕಾರ ಕಾಯಿದೆಯನ್ನು ಹಿಂಪಡೆಯ ಬೇಕಾಯಿತು. ಹಿಂಪಡೆಯುವಾಗ ರೈತರಿಗಾಗಿ ಕಾಯಿದೆ ತರಲಾಯಿತು; ದೇಶಕ್ಕಾಗಿ ಅವನ್ನು ಹಿಂದಕ್ಕೆ ಪಡೆಯಲಾಗಿದೆ ಎಂದು ಮಾರ್ಮಿಕವಾಗಿ ಮೋದಿಯವರು ಹೇಳಿರುವುದು ಗಮನಾರ್ಹ.

ಕೃಷಿ ಕ್ಷೇತ್ರದಲ್ಲಿ ಅತ್ಯಗತ್ಯವಾಗಿ ಬೇಕಾಗಿರುವ ಸುಧಾರಣೆಯು ಇಂದು ಸರ್ಕಾರ ಕಾರ್ಯರೂಪಕ್ಕೆ ತರಲು ಸಾಧ್ಯವಾಗಿಲ್ಲ. ಪಟ್ಟಭದ್ರ ಹಿತಾಸಕ್ತಿಗಳು ನಿಂತನೀರಾಗುವುದಕ್ಕೆ ಹಠ ಹಿಡಿದು ರೈತಾಪಿ ವರ್ಗದ ಹಿತಕ್ಕೆ ಧಕ್ಕೆ ತಂದಿದ್ದಾರೆ. ಒಂದು ವರ್ಷದಿಂದ ಸಾಗಿದ್ದ ರೈತ ಹೋರಾಟವನ್ನು ಕೊನೆಗಾಣಿಸಲು ಹಲವು ಸುತ್ತಿನ ಮಾತುಕತೆ ರೈತ ಸಂಘ ಮತ್ತು ಸರ್ಕಾರದ ನಡುವೆ ನಡೆಯಿತು. ಎಲ್ಲ ರೀತಿಯ ಉಪಯುಕ್ತತೆಯನ್ನು ತಿಳಿಸಲಾಯಿತು ಆದರೆ ಯಾವ ಸಂಧಾನ ಸಲಹೆಗೆ ಜಗ್ಗದೆ ತಮ್ಮ ಹಠ ಸಾಧಿಸಿಕೊಂಡಿದ್ದಾರೆ.

ಕಳೆದ ಒಂದು ವರ್ಷದಿಂದ ಬಿಜೆಪಿಯ ಶಾಸಕರು ಲೋಕಸಭಾ ಸದಸ್ಯರು ಮತ್ತು ರಾಜ್ಯ ಸರ್ಕಾರಗಳು ರೈತರನ್ನು ಮನವೊಲಿಸುವ ಮತ್ತು ಕೃಷಿ ಕಾಯಿದೆಯ ಲಾಭವನ್ನು ತಿಳಿಸುವ ಕಾರ್ಯದಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ವೋಟು ಪಡೆದು ಗದ್ದುಗೆ ಹಿಡಿಯಲು ಮೋದಿಯವರ ಜಪ ಮಾಡುವವರು ಮೋದಿಯವರ ಈ ಸುಧಾರಣಾ ಕೆಲಸಕ್ಕೆ ಬೆಂಬಲವಾಗಿ ನಿಂತು ರೈತರಿಗೆ ಮನವರಿಕೆ ಮಾಡಿಕೊಡಲು ಆಸಕ್ತಿವಹಿಸಲಿಲ್ಲ. ತಮ್ಮ ತಮ್ಮ ಕ್ಷೇತ್ರಗಳಲ್ಲಿ ರೈತರನ್ನು ಭೇಟಿಯಾಗಿ ಅವರ ಅಹವಾಲು ಆಲಿಸಿ ಸಂದೇಹ ಬಗೆಹರಿಸುವ ಕೆಲಸ ಮಾಡಬೇಕಿತ್ತು. ಗುಂಪು ಸಭೆಗಳ ಮೂಲಕ ಕಾಯಿದೆ ವಿವರ ನೀಡಬಹುದಿತ್ತು. ಆದರೆ ಆಡಳಿತ ಪಕ್ಷದವರು ಈ ಸಕಾರಾತ್ಮಕ ಚಟುವಟಿಕೆಯ ತಂಟೆಗೆ ಹೋಗಲೇ ಇಲ್ಲ.

ಅನೇಕ ರಾಜ್ಯ ಸರ್ಕಾರಗಳು ಈಗಾಗಲೇ APMC ಕಾಯಿದೆ ತಿದ್ದುಪಡಿಯನ್ನು ತಂದು ರೈತರು ತಮ್ಮ ಉತ್ಪನ್ನಗಳನ್ನು ನೇರವಾಗಿ ಮಾರಾಟ ಮಾಡಲು ಅನುವು ಮಾಡಿಕೊಟ್ಟಿವೆ. ತತ್ಪರಿಣಾಮ ನಮ್ಮ ರಾಜ್ಯದಲ್ಲಿಯೇ ಹತ್ತಾರು ಅಕಖಇ ಖಾಲಿ ಕೂತಿವೆ. ಅಕಖಇ ಯಲ್ಲಿ ಮಾರಾಟ ಮಾಡಿದರೆ ಸೆಸ್ ನೀಡಬೇಕು ಮಧ್ಯವರ್ತಿಗಳ ಕಾಟ ಇದರಿಂದ ಬೆಸತ್ತಿದ್ದ ರೈತ ನೇರವಾಗಿ ಉತ್ಪನ್ನಗಳನ್ನು ಮಾರಾಟ ಮಾಡಿ ಅದನ್ನು ಉಳಿಸುತ್ತಿದ್ದಾರೆ. ಈಗಾಗಲೇ ಇದರ ಲಾಭವನ್ನು ಪಡೆದಿರುವ ರೈತರ ಮೂಲಕ ಪ್ರಚಾರ ಕೈಗೊಳ್ಳಬೇಕಾಗಿತ್ತು. ಅವರ ಅನುಭವ ಇತರರಿಗೆ ತಲುಪುವಂತೆ ಮಾಡಬೇಕಿತ್ತು. ಆದರೆ ಪಕ್ಷ ಮತ್ತು ಜನಪ್ರತಿನಿಧಿಗಳು ಸೋತರು.

APMC ವ್ಯವಸ್ಥೆಯು ಅತ್ಯಂತ ಭ್ರಷ್ಟವಾಗಿದೆ. ದಲ್ಲಾಳಿಗಳು ಶೋಷಣೆ ಮಾಡುತ್ತಾರೆ ಎಂದು ರೈತರೆ ದೂರುತ್ತಾರೆ. ಅಕಖಇ ಅಧ್ಯಕ್ಷರ ಚುನಾವಣೆಯಲ್ಲಿ ಹಣದ ಹೊಳೆಯೇ ಹರಿಯುತ್ತದೆ. ಲಾಭವಿಲ್ಲದೆ ಲಕ್ಷಗಟ್ಟಲೆ ಹಣ ವೆಚ್ಚ ಮಾಡುತ್ತಾರಾ? ಗೆದ್ದಮೇಲೆ ಲಾಭ ಪಡೆಯುವುದು ರೈತರನ್ನು ಏಮಾರಿಸಿಯೇ. ಈ ಎಲ್ಲ ಅನಿಶ್ಚಿತತೆ ಕೊನೆಗಾಣಿಸಿ ರೈತರ ಉತ್ಪನ್ನಗಳಿಗೆ ಹೆಚ್ಚಿನ ದರ ದೊರೆಯುವ ಪರ್ಯಾಯ ಮಾರ್ಗವನ್ನು ಇಂದು ರಾಜಕೀಯ ಕಾರಣಗಳಿಗೆ ರದ್ದಾಗುವಂತೆ ಮಾಡಿರುವುದು ಕೃಷಿ ಕ್ಷೇತ್ರದಲ್ಲಿ ಸುಧಾರಣೆಗೆ ಮಾರಣಾಂತಿಕ ಪೆಟ್ಟನ್ನು ನೀಡಿದ್ದಾರೆ.

ಕಾಯಿದೆಯಲ್ಲಿನ ದೋಷಗಳನ್ನು ಮತ್ತು ಬೇಕಾದ ತಿದ್ದುಪಡಿಯ ಕುರಿತು ಮಾತುಕತೆ ಮಾಡದೆ ಕಾಯಿದೆ ರದ್ದು ಪಡಿಸಿ ಎಂದು ಬೋರ್ಡ್ ಹಿಡಿದುಕೊಂಡು ಕೂತರೆ ಇವರ ಉದ್ದೇಶ ರೈತರ ಹಿತ ಕಾಪಾಡುವುದಾ ಎಂಬ ಅನುಮಾನ ಬಾರದಿರಲಿಲ್ಲ. ಕಾಯಿದೆಯು ಹಿಂಪಡೆದಿರುವುದು ಖಂಡಿತವಾಗಿ ಮೋದಿ ಸರ್ಕಾರದ ಸೋಲಲ್ಲ ಬದಲಿಗೆ ಪ್ರಾಮಾಣಿಕ ರೈತರ ಸೋಲಾಗಿದೆ ಅವರ ಬದುಕು ಹಸನಾಗುವ ಬದಲಾವಣೆಗೆ ತಡೆಯೊಡ್ಡಿ ಅವರ ಆದಾಯಕ್ಕೆ ಹೊಡತ ನೀಡಿದ್ದಾರೆ. ಇದರಿಂದ ರೈತರ ಸಂಕಷ್ಟಕ್ಕೆ ಪರಿಹಾರ ಮತ್ತೆ ಮರೀಚಿಕೆಯಾಗಿದೆ. ಕೃಷಿ ಕ್ಷೇತ್ರದಲ್ಲಿ ಹೇಗೆ ರೈತರ ಬದುಕು ಹಸನುಗೊಳಿಸುತ್ತಾರೆ ಎಂಬುದಕ್ಕೆ ರೈತ ನಾಯಕರ ಬಳಿ ಉತ್ತರವಿಲ್ಲ. ಹಾಗೆ ನೋಡಿದರೆ ಇವರ ಬಳಿ ಯಾವುದೆ ಪರ್ಯಾಯವಾದ ಪರಿಹಾರ ಇರುವಂತೆ ಕಂಡುಬಂದಿಲ್ಲ ಇದ್ದಿದ್ದರೆ ಸಲಹಾತ್ಮಕ ರೂಪದಲ್ಲಿ ಸರ್ಕಾರಕ್ಕೆ ನೀಡಿ ರೈತರ ಬಗ್ಗೆ ತಮಗಿರುವ ಪ್ರಾಮಾಣಿಕ ಕಾಳಜಿಯನ್ನು ತೋರಬೇಕಿತ್ತು.

ರೈತಸಂಘದವರು ಈಗ ತಮ್ಮ ಹೋರಾಟ ಕೊನೆಗಾಣಿಸಲು ಮತ್ತೆ 6 ಶರತ್ತುಗಳನ್ನು ಇಟ್ಟಿದ್ದಾರೆ ಆದರೆ ಒಂದಾದರು ರೈತರ ಹಿತ ಕಾಪಾಡುವ ಬೇಡಿಕೆಯೇ ಅಲ್ಲ, ರಾಜಕೀಯ ಪ್ರೇರಿತ ಮತ್ತು ಕಾರ್ಯಸಾಧುವಲ್ಲದ ಬೇಡಿಕೆ ಮೂಲಕ ಸರ್ಕಾರವನ್ನು ಮಣಿಸಬಹುದು ಎಂದು ಮತ್ತೊಂದು ಸಂಘರ್ಷಕ್ಕೆ ಸಿದ್ಧವಾಗಿದ್ದಾರೆ.

91ರಲ್ಲಿ ಜಾರಿಗೆ ಬಂದ ಆರ್ಥಿಕ ಉದಾರೀಕರಣ ನೀತಿಯನ್ನು ವಿರೋಧದ ಕಾರಣ ಹಿಂಪಡೆದಿದ್ದರೆ ಇಂದು ದೇಶ ಇಷ್ಟು ಪ್ರಗತಿಯಾಗಲು ಸಾಧ್ಯವಾಗುತ್ತಿತ್ತಾ? ತದನಂತರ ಬಂದ ಸರ್ಕಾರಗಳು ಉದಾರೀಕರಣ ನೀತಿಯನ್ನು ಬೆಂಬಲಿಸಿದ ಕಾರಣ ಭಾರತ ತಡವಾಗಿಯಾದರು ನಿಶ್ಚಿತವಾಗಿ ವಿಶ್ವದ ಆರ್ಥಿಕ ಶಕ್ತಿಯಾಗಿ ಬೆಳೆಯಲು ಸಾಧ್ಯವಾಗಿದೆ.

ಆಡಳಿತ ನಡೆಸುವವರು ಜನರ ಹಿತಕ್ಕಾಗಿ ಸುಧಾರಣೆ ತಂದಾಗ ಅದರಿಂದ ತಮಗೆ ಚುನಾವಣೆಯಲ್ಲಿ ಹಿನ್ನಡೆಯಾಗುತ್ತದೆ ಎಂದಾಗ ತಮ್ಮ ಉಳಿವಿಗಾಗಿ ಮತ್ತೆಂದು ಸುಧಾರಣೆ ತರಲು ಮುಂದಾಗುವುದಿಲ್ಲ ಇದರಿಂದ ನಷ್ಟವಾಗುವುದು ಜನರಿಗೆ. ಒಂದಂತೂ ನಿಶ್ಚಿತ ಬಹುಬೇಗ ರೈತರಿಗೆ ಈ ಸತ್ಯ ಅರಿವಾಗುವುದರಲ್ಲಿ ಯಾವ ಸಂದೇಹವಿಲ್ಲ.

ವೇದಾಂತಿ ಹೇಳಿದ ಕಥೆ

ಶಶಾಂಕ್ ಮುದೂರಿ

ಪ್ರಾಪ್ತಿ ಇದ್ದಾಗ ಮಾತ್ರ ದೊರಕೀತು

ಹದಿನೈದನೆಯ ಶತಮಾನದಲ್ಲಿದ್ದ ರಜಪೂತ ರಾಜ ಪ್ರತಾಪ್ ಸಿಂಗ್ ರಾಜ ಪೀಪಾಜಿ (ರಾಜ ಪೀಪ)ನಿಗೆ ಅಧ್ಯಾತ್ಮ ಎಂದರೆ ಗೌರವ. ತನ್ನ ಸಂಪರ್ಕಕ್ಕೆ ಬಂದ ಎಲ್ಲಾ ಸನ್ಯಾಸಿ, ಯೋಗಿಗಳ ಬಳಿ ಹೋಗಿ ಮೋಕ್ಷ ಮಾರ್ಗವನ್ನು ಕರುಣಿಸುವಂತೆ ಕೇಳಿಕೊಳ್ಳುತ್ತಿದ್ದ.

ಅವನ ರಾಜ್ಯದಲ್ಲಿ ರವಿ ದಾಸ್ ಎಂಬ ಸಂತನು ಕುಟೀರ ಕಟ್ಟಿಕೊಂಡು, ಚಮ್ಮಾರ ವೃತ್ತಿಯನ್ನು ಮಾಡುತ್ತಾ, ಅಧ್ಯಾತ್ಮ ಸಾಧನೆಯಲ್ಲಿ ನಿರತನಾಗಿದ್ದ. ಆತನ ಕುಟೀರಕ್ಕೆ ಭೇಟಿ ನೀಡಬೇಕೆಂಬ ಅಭಿಲಾಷೆ ರಾಜ ಪೀಪಾಜಿಯದ್ದು. ಆದರೆ, ತಾನು ರಾಜನಾಗಿದ್ದುದರಿಂದ, ಅಲ್ಲಿಗೆ ಭೇಟಿ ನೀಡಿದರೆ ಜನರು ಏನಂದುಕೊಳ್ಳುತ್ತಾರೋ ಎಂಬ ಅಳುಕು. ಒಂದು ದಿನ ರಾಜ್ಯದಲ್ಲಿ ದೊಡ್ಡ ಜಾತ್ರೆ. ಜನರೆಲ್ಲರೂ ಜಾತ್ರೆಯಲ್ಲಿ ಭಾಗವಹಿಸುವ ಸಮಯ ನೋಡಿಕೊಂಡು, ಯಾರಿಗೂ ಗೊತ್ತಾಗದಂತೆ, ರವಿ ದಾಸ್‌ನ ಕುಟೀರಕ್ಕೆ ರಾಜ ಭೇಟಿ ನೀಡಿದ.

ರವಿ ದಾಸ್‌ನು ತನ್ನ ಎಂದಿನ ಚಮ್ಮಾರಿಕೆ ಕರ್ತವ್ಯದಲ್ಲಿ ನಿರತನಾಗಿದ್ದ. ಒಂದು ದೊಡ್ಡ ನೀರಿನ ಪಾತ್ರೆಯಲ್ಲಿ ಚರ್ಮವನ್ನು ಹದ ಮಾಡುತ್ತಿದ್ದ ರವಿದಾಸನಿಗೆ ರಾಜ ಪೀಪಾಜಿಯು ನಮಸ್ಕರಿಸಿ, 'ಗುರುಗಳೇ, ನನಗೆ ಅಧ್ಯಾತ್ಮ ಪಥವನ್ನು ಕರುಣಿಸಿ' ಎಂದು ವಿನಂತಿಸಿದ.

ರವಿ ದಾಸನು ಕೆಲವು ಕ್ಷಣ ರಾಜನನ್ನು ನೋಡಿ 'ಈ ಪಾತ್ರೆಯಲ್ಲಿರುವ ನೀರನ್ನು ಈಗಲೇ ಕುಡಿ.' ಎಂದು ಚರ್ಮ ಹದ ಮಾಡುತ್ತಿದ್ದ ಪಾತ್ರೆಯನ್ನು ತೋರಿಸಿದ.

ಅದನ್ನು ಕೇಳಿ ರಾಜ ಮರು ಮಾತನಾಡಲಿಲ್ಲ, ಸಂತ ರವಿದಾಸ ಹೇಳಿದ್ದನ್ನು ಮಾಡಲೇಬೇಕು, ಆದರೆ ಚರ್ಮ ಹದ ಮಾಡಿದ ನೀರನ್ನು ಕುಡಿಯುವುದಾದರೂ ಹೇಗೆ? ರಾಜ ಚಾಣಾಕ್ಷತನದಿಂದ ಯೋಚಿಸಿದ. ಆ ದಿನ ಆತ ಧರಿಸಿದ್ದ ಅಂಗಿಯು ಉದ್ದವಿದ್ದು, ದಪ್ಪನೆಯ ಹತ್ತಿ ಮತ್ತು ರೇಷ್ಮೆಯಿಂದ ತಯಾರಿಸಿದ್ದಾಗಿತ್ತು. ಅಂಗಿಯ ಕೈಗಳನ್ನು ಮಣಿಕಟ್ಟಿನ ಬಳಿ ಬಿಗಿಯಲಾಗಿತ್ತು.

ರಾಜನು ಪಾತ್ರೆಯನ್ನು ಎತ್ತಿಕೊಂಡು, ತುಸು ತುಸುವೇ ನೀರನ್ನು ಅಂಗಿಯ ಕೈಗಳ ಬಳಿ ಬಿಟ್ಟುಕೊಳ್ಳುತ್ತಾ ಹೋದ. ನಿಧಾನವಾಗಿ ಆ ದಪ್ಪ ನಿಲುವಂಗಿಯು ಪಾತ್ರೆಯಲ್ಲಿದ್ದ ನೀರನ್ನು ಪೂರ್ತಿಯಾಗಿ ಹೀರಿಕೊಂಡಿತು. ಒಳಗಿನಿಂದ ಹೊರಬಂದ ರವಿದಾಸ್‌ನು, 'ರಾಜನೇ, ನೀರು ಕುಡಿದದ್ದು ಸಾಕು. ಇನ್ನು ನೀನು ಆಸ್ಥಾನಕ್ಕೆ ಹೋಗು. ಅಧ್ಯಾತ್ಮ ಪಥಕ್ಕೆ ಅಗತ್ಯ ಎನಿಸುವ ಉಳಿದ ಕೆಲಸವನ್ನು ನಾನು ಮಾಡುತ್ತೇನೆ' ಎಂದ. ರಾಜನು ಅರಮನೆಗೆ ವಾಪಸಾದ. ಚರ್ಮ ತೊಳೆದ ನೀರಿನಿಂದ ತುಂಬಿಹೋಗಿದ್ದ ಆತನ ನಿಲುವಂಗಿಯನ್ನು ಬೇಗನೆ ಬದಲಾಯಿಸ ಬೇಕಿತ್ತು. ನಿಲುವಂಗಿಯನ್ನು ತೆಗೆದು, ಸೇವಕರನ್ನು ಕರೆದು ಅದನ್ನು ಸ್ವಚ್ಛಗೊಳಿಸಲು ಮಡಿವಾಳನಿಗೆ ನೀಡುವಂತೆ ಹೇಳಿದ. ಮಡಿವಾಳನು ಆ ನಿಲುವಂಗಿಯನ್ನು ತನ್ನ ಮನೆಗೆ ಕೊಂಡೊಯ್ದು, ಅದರ ಮೇಲಿನ ಕಲೆಗಳನ್ನು ಸ್ವಚ್ಛಗೊಳಿಸುವ ಉದ್ದೇಶದಿಂದ, ಅದನ್ನು ಜಗಿದು ಶುಭ್ರಗೊಳಿಸುವಂತೆ ತನ್ನ ಮಗಳಿಗೆ ಹೇಳಿದ. ಮಡಿವಾಳನ ಮಗಳು ಆ ನಿಲುವಂಗಿಯನ್ನು ಜಗಿಯುತ್ತಾ, ಹೀರಿದ ನೀರನ್ನು ಉಗಿಯುವ ಬದಲು, ಕುಡಿದುಬಿಟ್ಟಳು. ಆಗ ಒಂದು ಪವಾಡ ಜರುಗಿತು. ಆ ನೀರನ್ನು ಕುಡಿದ ಹುಡುಗಿಯಲ್ಲಿ ಅಸಾಧಾರಣ ದೈವಿಕ ಶಕ್ತಿ ತುಂಬಿಕೊಂಡಿತು. ಕೆಲವೇ ದಿನಗಳಲ್ಲಿ ಆಕೆಯು ಪವಾಡ ಶಕ್ತಿ ಹೊಂದಿದವಳಾಗಿ ಪ್ರಸಿದ್ಧಳಾದಳು.

ಈ ವಿಚಾರವು ಪ್ರತಾಪ ಸಿಂಗ್ ರಾಜ ಪೀಪಾಜಿಗೆ ತಿಳಿಯಿತು. ತನ್ನ ಊರಿನಲ್ಲಿರುವ ಎಲ್ಲಾ ಪವಾಡ ಪುರುಷರನ್ನು ಭಕ್ತಿಯಿಂದ ಕಾಣುವ ರಾಜನು, ಒಂದು ದಿನ ಮಡಿವಾಳನ ಮನೆಗೆ ಬಂದು, ಆತನ ಮಗಳಿಗೆ ನಮಸ್ಕರಿಸಿದ. 'ನಾನು ರಾಜನಾಗಿ ಇಲ್ಲಿಗೆ ಬಂದಿಲ್ಲ, ಭಿಕ್ಷುಕನಾಗಿ ಬಂದಿರುವೆ. ನನಗೆ ಮುಕ್ತಿ ಮಾರ್ಗವನ್ನು ತೋರಿಸು ತಾಯಿ' ಎಂದು ಕೇಳಿಕೊಂಡ.

ಆ ಹುಡುಗಿಯು ನಸುನಕ್ಕು, 'ರಾಜನೇ, ನನ್ನ ಈ ಶಕ್ತಿಯೆಲ್ಲವೂ ನಿನ್ನ ಕೃಪೆಯಿಂದ ಬಂದದ್ದು' ಎಂದು ರಾಜನಿಗೆ ನಡೆದದ್ದನ್ನು ತಿಳಿಸಿದಳು. 'ನಿನ್ನ ನಿಲುವಂಗಿಯಲ್ಲಿದ್ದ ನೀರನ್ನು ಕುಡಿದ ತಕ್ಷಣ ನನಗೆ ಈ ಶಕ್ತಿ ಕುದುರಿಬಂತು' ಎಂದಳು. ತಕ್ಷಣ ರವಿದಾಸ್‌ನ ಕುಟೀರಕ್ಕೆ ಹೋಗಿ, 'ಮಹಾಸ್ವಾಮಿಗಳೇ, ನನಗೆ ಇನ್ನೊಮ್ಮೆ ಆ ಚರ್ಮ ತೊಳೆದ ನೀರನ್ನು ನೀಡುವಿರಾ?' ಎಂದು ವಿನಂತಿಸಿದ.

'ಅವತ್ತು ನೀನು ಬಂದಾಗ, ರಾಜನಿಗೆ ಕೊಡುಗೆಯಾಗಿ ಇರಲಿ ಎಂದು, ಹಿಮಾಲಯದ ಪವಿತ್ರ ಕುಂಡದಿಂದ ತಂದ ಅಮೃತಸಮಾನ ಜಲವನ್ನು ನಿನಗೆ ನೀಡಿದ್ದೆ. ಆದರೆ ನೀನು ಆ ದಿನ ಅದನ್ನು ಕುಡಿಯಲೇ ಇಲ್ಲ! ಮಡಿವಾಳನ ಮಗಳು ಕುಡಿದಳು, ಆಕೆ ಸಂತಳಾಗಿ ರೂಪುಗೊಂಡಳು. ಆ ದಿನ ಆಕೆಗೆ ಪ್ರಾಪ್ತಿ ಇತ್ತು, ನಿನಗೆ ಇರಲಿಲ್ಲ' ಎಂದ ಸಂತ ರವಿದಾಸ್. ರಾಜ ತಲೆಬಾಗಿ ನಮಸ್ಕರಿಸಿದ. (ತನ್ನ ಸಾಧನೆಯನ್ನು ಮುಂದುವರಿಸಿದ ರಾಜನು, ಭಕ್ತಿ ಚಳವಳಿಯಲ್ಲಿ ತೊಡಗಿಕೊಂಡು, ಮುಂದೆ ರಾಜ ಪೀಪಾಜಿ ಎಂದು ಹೆಸರಾದ.)

ವಿವಾಹ ವಿಚ್ಛೇದನಗಳನ್ನು ತಡೆಗಟ್ಟಬಹುದೇ?

ಒಟ್ಟಿನಲ್ಲಿ ಕೇವಲ ಮದುವೆ ಮಾತ್ರ ಅದ್ದೂರಿಯಾದರೆ ಸಾಲದು; ದಾಂಪತ್ಯ ಜೀವನವೂ ಅದ್ದೂರಿಯಾಗಿರಬೇಕು! ವಿಚ್ಛೇದನದಿಂದ, ಇಬ್ಬರ ಬದುಕು ಅತಂತ್ರವಾಗಬಹುದು, ಮರುವಿವಾಹ ಕಷ್ಟಸಾಧ್ಯವಾಗಬಹುದು. ವಿವಾಹ ವಿಚ್ಛೇದನಗಳು ಮಕ್ಕಳ ಮನಸ್ಸಿನ ಮೇಲೂ, ಅವರ ಭವಿಷ್ಯದ ಮೇಲೂ ಅಗಾಧವಾದ ದುಷ್ಪರಿಣಾಮವನ್ನು ಬೀರಬಹುದು.

ಅಭಿಪ್ರಾಯ

ಕೆ.ಪಿ. ಪುತ್ತೂರಾಯ

vveditoped@gmail.com

ಈ ನಡುವೆ, ವಿವಾಹಿತರಲ್ಲಿ ವಿರಸಗಳು, ವಿವಾಹ ವಿಚ್ಛೇದನಗಳು ಹೆಚ್ಚಾಗುತ್ತಿರೋದು ಸತ್ಯ ಸಂಗತಿ. ದೊಡ್ಡ ದೊಡ್ಡ ಕಾರಣಗಳು ಬೇಕಿಲ್ಲ; ಸಣ್ಣ ಪುಟ್ಟ ಕ್ಷುಲ್ಲಕ ಕಾರಣಗಳಿಗೂ ಗಂಡ-ಹೆಂಡಿರು ಒಬ್ಬರಿಂದಿನ್ನೊಬ್ಬರು ದೂರ ಸರಿಯುತ್ತಾರೆ ಇಲ್ಲವೇ ಡೈವರ್ಸ್‌ಗಳಾಗುತ್ತಿರುತ್ತವೆ. 'ತಪ್ಪಡ್' ಎಂಬ ಚಲನಚಿತ್ರವನ್ನು ನೋಡಿದವರಿಗೆ, ಇದು ಸ್ಪಷ್ಟವಾಗಿ ತಿಳಿಯುತ್ತದೆ. ವಿದ್ಯಾವಂತರಲ್ಲೇ ಹಾಗೂ ಮಕ್ಕಳನ್ನು ಹಡೆದು, ಹಲವಾರು ವರುಷಗಳ ಕಾಲಕಳೆದ ದಾಂಪತ್ಯ ಜೀವನದ ನಂತರವೂ ಹೀಗಾಗುತ್ತಿರೋದು ಇನ್ನೂ ವಿಷಾದನೀಯ.

ಹಿಂದಿನ ಕಾಲದಲ್ಲಿ ವಿವಾಹ ವಿಚ್ಛೇದನಗಳ ಕಲ್ಪನೆಯೇ ಇಲ್ಲವಾಗಿತ್ತೆನ್ನಬಹುದು. ಕಾರಣ, ವಿವಾಹವೆಂದರೆ, ಜೀವನ ಪರ್ಯಂತ ಕಳಚಿಕೊಳ್ಳಲಾಗದ ಒಂದು ಬಂಧನ ಹಾಗೂ ಬದ್ಧತೆ ಎಂಬ ಬಲವಾಗಿ ಬೇರೂರಿದ ಭಾವನೆಯಿತ್ತು. ಭಾರತೀಯ ಸಂಸ್ಕೃತಿಯಲ್ಲಿ ಲಗ್ನದ ವೇಳೆ ಸಪ್ತಪದಿಗಳನ್ನು ತುಳಿದ ದಂಪತಿಗಳಿಗೆ ವಿವಾಹ ವಿಚ್ಛೇದನವಿಲ್ಲ ಎನ್ನಲಾಗಿದೆ. ಜತೆಗೆ ಹೆಣ್ಣಿಗೆ ಗಂಡನೊಂದಿಗೆ ಇರಲೇಬೇಕಾದ ಅನಿವಾರ್ಯತೆ, ಅವಲಂಬನೆ, ಸಾಮಾಜಿಕ ಕಟ್ಟುಪಾಡು ಇತ್ತು ಹಾಗೂ ಕುಟುಂಬದ ಗೌರವ, ಮಾನ - ಮರ್ಯಾದೆ ಎಲ್ಲಿ ಬೀದಿ ಪಾಲಾದೀತೋ ಎಂಬ ಭಯ ಬೇರೆ ಇರುತ್ತಿತ್ತು. ಗಂಡನ ಮನೆಯನ್ನು ತೊರೆದು ಬರುವ ಮಗಳಿಗೆ ತವರಿನವರ ಪ್ರೋತ್ಸಾಹವೂ ಇಲ್ಲವಾಗಿತ್ತು. 'ಏನೇ ಸಂಕಷ್ಟ ಸಮಸ್ಯೆಗಳಿದ್ದರೂ, ನಿನ್ನ ಗಂಡನ ಮನೆಯಲ್ಲಿದ್ದೇ ಪರಿಹರಿಸಿಕೊಂಡು ಬಿಡು; ಅವನ್ನೆಲ್ಲಾ ತವರು ಮನೆಗೆ ತಾರದಿರು; ಶಾಶ್ವತವಾಗಿ ಬಾರದಿರು' ಎಂಬುದೇ ಹೆತ್ತವರ ಕಿವಿಮಾತಾಗಿರುತ್ತಿತ್ತು. ಏನೇ ಭಿನ್ನಾಭಿಪ್ರಾಯಗಳಿದ್ದರೂ, ನೋವು ನಿಂದನೆಗಳಿದ್ದರೂ, ಕಷ್ಟ-ಸಂಕಷ್ಟಗಳಿದ್ದರೂ ಮಕ್ಕಳ ಮುಖ ನೋಡಿಯಾದರೂ ಎಲ್ಲವನ್ನೂ ಸಹಿಸಿಕೊಂಡು ನುಂಗಿಕೊಂಡು ಹಿಂದಿನ ಕಾಲದವರು ತ್ಯಾಗ, ತಾಳ್ಮೆಗಳನ್ನು ತಮ್ಮದಾಗಿಸಿಕೊಂಡು ಜೀವನ ನಡೆಸಿದರು. ಆದರೆ ಇಂದಿನ ಕಾಲ ಹಾಗಲ್ಲ. ಸಾಲ ಮಾಡಿಯಾದರೂ ಸರಿ, ಇದ್ದ ಒಂದಷ್ಟು ಆಸ್ತಿಯನ್ನು ಮಾರಿಯಾದರೂ ಸರಿ, ಒಣ ಪ್ರತಿಷ್ಠೆಗೆ ಒಳಗಾಗಿ ಹೆತ್ತವರು ಮಕ್ಕಳ ಮದುವೆಯನ್ನೇನೋ ಅದ್ದೂರಿಯಾಗಿ ಮಾಡಿಬಿಡುತ್ತಾರೆ. ಆದರೆ ಅವರ ದಾಂಪತ್ಯ ಜೀವನ ಅದ್ದೂರಿಯಾಗಿರೋದಿಲ್ಲ. ನಿಯೋಜಿತ ವಿವಾಹವೇ ಇರಲಿ; ಒಬ್ಬರಿನ್ನೊಬ್ಬರನ್ನು ಒಪ್ಪಿಕೊಂಡು ಆದ ಪ್ರೇಮ ವಿವಾಹವೇ ಇರಲಿ, ಎಷ್ಟೋ ಕುಟುಂಬಗಳಲ್ಲಿ ಮದುವೆ ಆದ ಕೆಲವೇ ತಿಂಗಳು ಇಲ್ಲವೇ ವರುಷಗಳಲ್ಲಿ ವಿವಾಹ ವಿಚ್ಛೇದನಗಳು ನಡೆದು ಹೋಗುತ್ತವೆ.

ಹೀಗಾಗಲು ಕಾರಣಗಳು ಅನೇಕ, ಒಬ್ಬರಿನ್ನೊಬ್ಬರ ಗುಣ ಸ್ವಭಾವಗಳನ್ನು ಅರ್ಥ ಮಾಡಿಕೊಳ್ಳದೇನೇ, ಬರೀ ರೂಪ, ಅಂತಸ್ತು ಏನೇನೋ ಕಲ್ಪನೆಗಳು, ಭ್ರಮೆ-ಭ್ರಾಂತಿಗಳಿಗೆ ಒಳಗಾಗಿ ಆತುರ-ಅವಸರದಲ್ಲಿ ಮಾಡಿಕೊಂಡ ಬಾಳ ಸಂಗಾತಿಯ ಆಯ್ಕೆ ವಿವಾಹ ವಿಚ್ಛೇದನದಲ್ಲಿ ಅಂತ್ಯಗೊಳ್ಳುತ್ತೆ. ಬರೀ ಶಾರೀರಿಕ ಸೌಂದರ್ಯದ ಆಕರ್ಷಣೆಗೆ ಒಳಗಾಗುವ ಯುವಕ ಯುವತಿಯರು, ಒಬ್ಬರಿನ್ನೊಬ್ಬರ ಆಂತರಿಕ ಸೌಂದರ್ಯವನ್ನೂ ಅರಿತುಕೊಳ್ಳುವ ಜಾಣ್ಮೆಯನ್ನು, ತಾಳ್ಮೆಯನ್ನು ಹೊಂದಿರುವುದಿಲ್ಲ. ಕೇವಲ ಕೆಲವಾರು ಭೇಟಿಗಳಿಂದ ಇದು ಕಷ್ಟ ಸಾಧ್ಯವಾದರೂ, ಸುದೀರ್ಘ ಮಾತುಕತೆ, ವಿಮರ್ಶೆ, ವಿಚಾರಧಾರೆಗಳ ವಿನಿಮಯದಿಂದ ಸಾಧ್ಯ.

ಹೊಂದಾಣಿಕೆಯ ಕೊರತೆ

ಆರಂಭದಲ್ಲಿ ಚೆನ್ನಾಗಿದ್ದ ದಂಪತಿಗಳಲ್ಲಿ ವರುಷಗಳು ಕಳೆದಂತೆ, ತಮ್ಮ ನಡೆ ನುಡಿಗಳಲ್ಲಿ ನಡತೆ ವರ್ತನೆಗಳಲ್ಲಿ ಬದಲಾಗೋದುಂಟು. ಸಹಬಾಳ್ವೆಯ ಸೂತ್ರ ದುರ್ಬಲವಾದಾಗ, ಸಣ್ಣ ಪುಟ್ಟ ತಪ್ಪುಗಳೂ, ಕೊರತೆಗಳೂ ದೊಡ್ಡದಾಗಿ ಕಾಣಲಾರಂಭಿಸುತ್ತವೆ. ಮೊದಲಿದ್ದ ಆಕರ್ಷಣೆ, ಪ್ರೀತಿ ಇಲ್ಲವಾಗಬಹುದು. ಇದು ಸಹಿಸಲಾರದ ಮಟ್ಟಕ್ಕೆ ಏರಿದಾಗ ವಿವಾಹ ವಿಚ್ಛೇದನವೇ ಉಳಿದಿರುವ ಏಕೈಕ ಮಾರ್ಗ. ಇಂತಹ ಸಂದರ್ಭದಲ್ಲಿ ಇನ್ನಷ್ಟು ಹೊಂದಾಣಿಕೆಯೊಂದೇ ದಾಂಪತ್ಯ ಜೀವನವನ್ನು ಮುಂದುವರಿಸಲು ಉಳಿದಿರುವ ಏಕೈಕ ಮಾರ್ಗ. ಇತರರನ್ನು ಬದಲಿಸಲು ಸಾಧ್ಯವಾಗದಿದ್ದಲ್ಲಿ ಕೊಂಚ ನಾವೇ ಬದಲಾಗಬೇಕಾಗುತ್ತದೆ.

ತ್ಯಾಗದ ಮನೋಭಾವವಿಲ್ಲದಿರೋದು ಪ್ರತಿಯೊಂದು ವಿಚಾರದಲ್ಲೂ ನಾನು ಹೇಳಿದ್ದೇ ನಡೆಯಬೇಕು; ನಾನೇ ಗೆಲ್ಲಬೇಕೆಂಬ ಹಠಮಾರಿತನದಿಂಧ ಮನೆಯಲ್ಲಿ ಗಂಡ ಹೆಂಡತಿಯರಿಬ್ಬರೂ ಸ್ಪರ್ಧಿಗಳಾದರೆ, ಕದನ ಕಟ್ಟಿಟ್ಟ ಬುತ್ತಿ. ಸಂಸಾರದಲ್ಲಿ ಸೋತುಗೆಲ್ಲಬೇಕು; ಗೆದ್ದು ಸೋಲಬಾರದು.'ಬಾಡಿಹೋದರೆ, ಮನೆಯ ತೋರಣ, ಅದಕೆ ನಾನು ಮಾತ್ರವಲ್ಲ, ನೀನೂ ಕಾರಣವೆಂಬ ಕವಿಯ ಮಾತನ್ನು ಮರೆಯಬಾರದು.

ಅಹಂ ಸುಗಮ ದಾಂಪತ್ಯ ಜೀವನಕ್ಕೆ ಅಡ್ಡಿಯಾಗುತ್ತದೆ. ಈ ಸತ್ಯವನ್ನೇ ರಾಷ್ಟ್ರ ಕವಿ ಜಿ.ಎಸ್. ಶಿವರುದ್ರಪ್ಪನವರು ಬರೆದರು 'ಹತ್ತಿರವಿದ್ದರು ದೂರ ನಿಲ್ಲುವೆವು ನಮ್ಮ ಅಹಮ್ಮಿನ ಕೋಟೆಯಲಿ. ಎಷ್ಟು ಕಷ್ಟವೂ ಹೊಂದಿಕೆ ಎಂಬುದು ಈ ನಾಲ್ಕುದಿನದ ಬಾಳಿನಲ್ಲಿ!' ಈ ಅಹಂ ಬರಲು ಕಾರಣಗಳು ಹಲವು; ರೂಪ, ಅಧಿಕಾರ, ಅಂತಸ್ತು ಇತ್ಯಾದಿ. ಆದರೆ ಇವೆಲ್ಲವೂ ಶಾಶ್ವತವಲ್ಲದ ಸೊತ್ತು ಸಂಪತ್ತುಗಳೆಂಬ ಅರಿವಾದರೆ, ಅಹಂ ನಮ್ಮ ಬಳಿ ಸುಳಿಯದು.

ವರದಕ್ಷಿಣೆಗಾಗಿ ನೀಡುವ ಕಿರುಕುಳದಿಂದಾಗಿ ಹುಡುಗಿ ವಿವಾಹ ವಿಚ್ಛೇದನವನ್ನು ಬಯಸುವುದುಂಟು. ಆಗ ಅದಕ್ಕೆ ಕಾನೂನಿನ ರಕ್ಷಣೆಯೂ ಇದೆ. ಲೈಂಗಿಕ ಅತೃಪ್ತಿ, ಬದಲಾವಣೆಯ ಆಸೆ ಅನಿರೀಕ್ಷಿತ ಸನ್ನಿವೇಶಗಳಿಂದಾಗಿ ವಿವಾಹೇತರ ಅನೈತಿಕ ಸಂಬಂಧಗಳಿಗೆ ಕಾರಣವಾಗಿ, ವಿವಾಹ ವಿಚ್ಛೇದನಗಳಾಗುವುದುಂಟು.

ಅಂತೆಯೇ, ಆರೋಗ್ಯದ ಸಮಸ್ಯೆಗಳಿಂದ, ಬಂಜೆತನ ಇಲ್ಲವೇ ಮಕ್ಕಳನ್ನು ಹಡೆಯುವುದರಿಂದ ವಂಚಿತರಾದ ದಂಪತಿಗಳೂ ಬೇರೆಯಾಗೋದುಂಟು. ಇಂತಹ ಸಂದರ್ಭಗಳಲ್ಲಿ ವೈದ್ಯಕೀಯ ತಪಾಸಣೆಗಳಿಗೆ ಒಳಗಾಗಿ, ಸಮಸ್ಯೆಗಳನ್ನು ಪರಿಹರಿಸಿಕೊಳ್ಳೋದು ಸೂಕ್ತ. ಪರಿಹಾರವೇ ಇಲ್ಲವೆಂದಾದಲ್ಲಿ ತ್ಯಾಗವೊಂದೇ ಉಳಿದಿರುವ ಮಾರ್ಗ.

ಒಟ್ಟಿನಲ್ಲಿ ಕೇವಲ ಮದುವೆ ಮಾತ್ರ ಅದ್ದೂರಿಯಾದರೆ ಸಾಲದು; ದಾಂಪತ್ಯ ಜೀವನವೂ ಅದ್ದೂರಿಯಾಗಿರಬೇಕು! ವಿಚ್ಛೇದನದಿಂದ, ಇಬ್ಬರ ಬದುಕು ಅತಂತ್ರವಾಗಬಹುದು, ಮರುವಿವಾಹ ಕಷ್ಟಸಾಧ್ಯವಾಗಬಹುದು. ವಿವಾಹ ವಿಚ್ಛೇದನಗಳು ಮಕ್ಕಳ ಮನಸ್ಸಿನ ಮೇಲೂ, ಅವರ ಭವಿಷ್ಯದ ಮೇಲೂ ಅಗಾಧವಾದ ದುಷ್ಪರಿಣಾಮವನ್ನು ಬೀರಬಹುದು. ಮಕ್ಕಳ ಹಿತದೃಷ್ಟಿಯಿಂದಾದರೂ ಡೈವರ್ಸ್ ಮಾಡಿಕೊಳ್ಳಬಾರದು.

ಈ ನಡುವೆ ಮಹಿಳೆಯರೂ ದುಡಿಯುವ ಕಾರಣ, ಸಹಜವಾಗಿ ಅವರಲ್ಲಿ ಸೃಷ್ಟಿಗೊಳ್ಳುವ ಅತಿಯಾದ ಸ್ವೇಚ್ಛಾಚಾರ, ಆರ್ಥಿಕ ಸ್ವಾತಂತ್ರ (independent life) ಇಲ್ಲವೇ ಗಂಡನಲ್ಲಿ ಹುಟ್ಟಿಕೊಳ್ಳುವ ಸಂಶಯ, ವಿವಾಹ ವಿಚ್ಛೇದನಕ್ಕೆ ಕಾರಣವಾಗಬಹುದು. ಇಂತಹ ಸಂದರ್ಭಗಳಲ್ಲಿ ವಿನಮ್ರತೆ, ನಂಬಿಕೆಗಳೇ ಸಹಕಾರಿ.

ಎಷ್ಟೋ ಮನೆಗಳಲ್ಲಿ ಮದ್ಯಪಾನ, ಜೂಜು, ಮಾದಕ ವಸ್ತುಗಳ ಚಟ, ಪರಸ್ತ್ರೀ ಸಂಬಂಧಗಳೇ ಮುಂತಾದ ದುರ್ವ್ಯಸನಗಳಿಗೆ ಒಳಗಾದ ಗಂಡನಿಂದ ಬೇಸತ್ತ ಮಡದಿ, ಅವನಿಂದ ದೂರವಾಗಲು ಬಯಸೋದು ಸಹಜ ಸ್ವಾಭಾವಿಕ ಹಾಗೂ ಸರ್ವೇ ಸಾಮಾನ್ಯ. ಇಂತಹ ಸಂದರ್ಭಗಳಲ್ಲಿ ಈ ದುಶ್ಚಟಗಳಿಂದ ಮುಕ್ತನಾಗಿ, ಮಡದಿಯನ್ನು ಉಳಿಸಿಕೊಳ್ಳುವ ಜವಾಬ್ದಾರಿ ಗಂಡನದಾಗಿರುತ್ತದೆ. ಲೌಕಿಕಸುಖ, ಅತಿ ಆಸೆಗಳು, ಪ್ರಲೋಭಗಳು, ಪ್ರಚೋದನೆಗಳು, ಊ ಈ ಜನರ ಸಂಪರ್ಕಗಳು ಕೂಡಾ ವಿವಾಹ ವಿಚ್ಛೇದನಗಳಿಗೆ ಕಾರಣವಾಗುವುದುಂಟು.

ಕೆಲವೊಮ್ಮೆ ತವರು ಮನೆಯವರ ಪ್ರೋತ್ಸಾಹ, ಕುಮ್ಮಕ್ಕು ಕೂಡಾ ವಿವಾಹ ವಿಚ್ಛೇದನಕ್ಕೆ ಕಾರಣವಾಗೋದುಂಟು. ಗಂಡ ಹೆಂಡಿರ ನಡುವಿನ ಪ್ರತಿಯೊಂದು ಸಮಸ್ಯೆಗೂ ತಲೆ ಹಾಕದೆ, ಅವನ್ನು ಪರಿಹರಿಸಿಕೊಳ್ಳುವ ಕೆಲಸವನ್ನು ಅವರಿಗೇ ಬಿಟ್ಟುಬಿಡೋದು ಎಂದೆಂದಿಗೂ ಸೂಕ್ತ. 'ಹೇಗೋ, adjust ಮಾಡಿಕೊಂಡು ಗಂಡನ ಜೊತೆಯೇ ಇರು. ನಾನಿಲ್ಲವೇ ನಿನ್ನಪ್ಪನ ಜೊತೆ ಕಳೆದ 50 ವರುಷಗಳಿಂದ!''

ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವೂ ನಮ್ಮ ದೇಶದಲ್ಲಾಗುತ್ತಿರುವ ವಿವಾಹ ವಿಚ್ಛೇದನಗಳಿಗೆ ಇನ್ನೊಂದು ಕಾರಣ. ಈ ಹಿನ್ನೆಲೆಯಲ್ಲಿ ದೇಶದ ಸಂಸ್ಕೃತಿಯನ್ನು ತಿಳಿ ಹೇಳುತ್ತಾ, ಸಂಸ್ಕಾರವನ್ನು ತುಂಬುವುದು ಹಿರಿಯರ ಕೆಲಸವಾಗಬೇಕು. ವಿರಸಕ್ಕೆ ಹಲವುದಾರಿ. ಆದರೆ ಸರಸ ದಾಂಪತ್ಯಕ್ಕೆ ಒಂದೇ ದಾರಿ ಅದುವೇ ಗಂಡ ಹೆಂಡತಿಯರ ನಡುವೆ ಇರಬೇಕಾದ ಪ್ರಶ್ನಾತೀತವಾದ ಪ್ರೀತಿ, ಸ್ನೇಹ, ಕಾಳಜಿ, ಬದ್ಧತೆ ಹಾಗೂ ಪರಸ್ಪರ ನಂಬಿಕೆ, ಗೌರವ, ಪ್ರೋತ್ಸಾಹ. ಇವುಗಳಿದ್ದಲ್ಲಿ, ಒಮ್ಮತವಿಲ್ಲದ ವಿಷಯಗಳನ್ನೂ ನಿಭಾಯಿಸಬಹುದು. ಸುಖೀ ಸಂಸಾರದ ಗುಟ್ಟು ಹಿಂದಿನ ಕಾಲದವರಂತೆ, ಗಂಡನ ಹಿಂದೆ ಹೆಂಡತಿಯೂ ಹೋಗಬೇಕಾಗಿಲ್ಲ; ಇಂದಿನ ಕಾಲದವರಂತೆ, ಹೆಂಡತಿಯ ಹಿಂದೆ ಗಂಡನೂ ಹೋಗಬೇಕಾಗಿಲ್ಲ; ಜೀವನಪರ್ಯಂತ ಜೊತೆ ಜೊತೆಯೂ ಹೋಗುತ್ತಿದ್ದರೆ ಸಾಕು. ಕಾರಣ ಕೊನೆಗೆ ದಕ್ಕುವುದು ಗಂಡನಿಗೆ ಹೆಂಡತಿ; ಹೆಂಡತಿಗೆ ಗಂಡ ಮಾತ್ರ! ಕಾರಣಗಳು ಏನೇ ಇರಲಿ, ವಿವಾಹ ವಿಚ್ಛೇದನ ಮಾಡಿಕೊಂಡವರು ಸುಖ ಶಾಂತಿ ನೆಮ್ಮದಿಯಿಂದಿರೋದು ಅಷ್ಟರಲ್ಲೇ ಇದೆ. ಆದುದರಿಂದ, ಅನಿವಾರ್ಯ ಸಂದರ್ಭಗಳ ಹೊರತಾಗಿ, ವಿವಾಹ ವಿಚ್ಛೇದನಗಳಿಂದ ದೂರವಿರೋದೇ ಲೇಸು.



ನಾರದ ಸಂಚಾರ

ಅಭ್ಯಾಗತ

abhyagatha@yahoo.co.in

ಪಶ್ಚಿಮ ಧ್ರುವದೀಂ, ದಕ್ಷಿಣ ಧ್ರುವಕೂ..

ಮಮತಾ ದೀದಿ ಸಾಮ್ರಾಜ್ಯ ವಿಸ್ತರಣಾ ದಾಹ ಎಲ್ಲಿಯವರೆಗೆ ಮುಂದುವರಿದಿದೆ ಎಂದರೆ ಶತಾಯಗತಾಯ ಗೋವಾವನ್ನು ಪುನಃ ತಮ್ಮ ತೆಕ್ಕೆಗೆ ತೆಗೆದುಕೊಳ್ಳಲೇಬೇಕೆಂದು ನಿರ್ಧರಿಸಿದಂತಿದೆ. ಅದಕ್ಕಾಗಿ ಸಿಗುವ ಯಾವ ಅವಕಾಶವನ್ನೂ ಬಿಡದ ದೀದಿ, ಇಷ್ಟರಲ್ಲೇ ಶ್ವೇತ ವಸ್ತ್ರಬಿಟ್ಟು ಹೂಹೂವಿನ ಫ್ರಾಕ್ ತೊಟ್ಟು

ಗೋವಾ ಪ್ರವಾಸ ಆರಂಭಿಸಿದರೂ ಅಚ್ಚರಿಯೇನಿಲ್ಲ ಎನ್ನುತ್ತಿದ್ದಾರೆ, ಹಾಗೆ ಅವರ ನ್ನು ಕಲ್ಪಿಸಿಕೊಂಡು ಮುಸಿಮುಸಿ ನಗುತ್ತಿರುವ ಟಿಎಂಸಿ ಕಾರ್ಯಕರ್ತರು. ಇರಲಿ ಬಿಡಿ, ಲೇಟೆಸ್ಟ್ ಸುದ್ದಿ ಏನೆಂದರೆ, ರಾಜ್ಯಸಭೆಯಲ್ಲಿ ಕಾಂಗ್ರೆಸ್‌ಗೆ ಉಪಕಾರ ಮಾಡುತ್ತ ಕುಳಿತಿದ್ದ ಟಿಎಂಸಿ, ಈ ಬಾರಿ ಆ ತಪ್ಪನ್ನು ತಿದ್ದಿಕೊಂಡಿದೆ. ಕಾಂಗ್ರೆಸ್‌ನ ಅಭಿಷೇಕ್ ಮನು ಸಿಂಘ್ವಿಯವರನ್ನು ಮೂರು ವರ್ಷ ಬೆಂಬಲಿಸಿ ರಾಜ್ಯ ಸಭೆಯಲ್ಲಿ ಪೊರೆದಿದ್ದರು ದೀದಿ. ಈ ಬಾರಿ ಆ ಸ್ಥಾನಕ್ಕೆ ಗೋವಾದ ಮಾಜಿ ಸಿಎಂ ಲೂಯಿಜಿನೋ ಫೆಲೋರಿಯೋ ಅವರನ್ನು ಪಶ್ಚಿಮ ಬಂಗಾಳದಿಂದ ರಾಜ್ಯಸಭೆಗೆ ಕಳುಹಿಸಲು ದೀದಿ ನಿರ್ಧರಿಸಿದ್ದಾರೆ. ಎಲ್ಲಿಯ ಗೋವಾ? ಎಲ್ಲಿಯ ಬಂಗಾಳ? ಇತ್ತೀಚೆಗಷ್ಟೇ ಸುಷ್ಮಿತಾ ದೇವ್‌ರನ್ನು ಇದೇ ರೀತಿ ಕಳುಹಿಸಿದ್ದರು ಮಮತಾ. ರಾಜ್ಯಸಭೆಯಲ್ಲಿರುವ ಪಕ್ಷದ 22 ಸದಸ್ಯ ಬಲಕ್ಕೆ ಹೀಗೆ ಹೊರಗಿನವರನ್ನೇ ರಾಜ್ಯದ ಕೋಟಾದಿಂದ ತರುತ್ತಿರುವ ಬಗ್ಗೆ ಅಸಮಾಧಾನಗೊಂಡಿರುವ ಟಿಎಂಸಿ ಹಿರಿಯ ನಾಯಕರು, ತಮ್ಮ 'ಬಣ್ಣಬಣ್ಣ'ದ ಕನಸನ್ನು ಕಮರಿಸುತ್ತಿರುವ ಗೋವಾ ಬಗ್ಗೆಯೇ ಕೆಂಡ ಕಾರುತ್ತಿದ್ದಾರೆ ಅಂತಾಯ್ತು? ಇನ್ನು ಗೋವಾದಲ್ಲಿ ಅಧಿಕಾರ ಹಿಡಿವ ಕನಸಿನ ಗತಿಯೇನು?

ಚೆನ್ನೈ ನ್ಯಾಯಾಧೀಶರಿಗೇ ತಡೆ!

'ಗಾಲಿಗಳ ಮೇಲೆ ನ್ಯಾಯ' ಎಂಬುದು ಮದ್ರಾಸ್ ಹೈಕೋರ್ಟ್ ವಿಚಾರದಲ್ಲಿ ಅನ್ವರ್ಥವಾದಂತೆ ಕಾಣುತ್ತಿದೆ. 3 ವರ್ಷದಲ್ಲಿ ಮೂವರು ಮುಖ್ಯ ನಾಯಮೂರ್ತಿಗಳನ್ನು ಕೊಲಿಜಿಯಂ, ಚೆನ್ನೈನಿಂದ ಬಿಡಾರ ತೆಗೆಸಿರುವುದು ನ್ಯಾಯವಾದಿಗಳ ಸಮುದಾಐದಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ಇದೀಗ ನ್ಯಾಯಮೂರ್ತಿ ಸಂಜಿಬ್ ಬ್ಯಾನರ್ಜಿ ಅವರನ್ನು ಮೇಘಾಲಯ ಹೈಕೋರ್ಟ್‌ಗೆ ವರ್ಗ ಮಾಡಲಾಗಿದೆ. ಕಳೆದ ಕೋವಿಡ್ ಸಂಕಷ್ಟದ ಸಂದರ್ಭದಲ್ಲೂ ಸಾವಿರಾರು ಪ್ರಕರಣಗಳನ್ನು ಸಮರೋಪಾದಿಯಲ್ಲಿ ಕಾರ್ಯ ನಿರ್ವಹಿಸಿ ಇತ್ಯರ್ಥಗೊಳಿಸಿದ್ದ ಮಾದರಿ ನ್ಯಾಯಾಧೀಶರನ್ನು ಬಿಟ್ಟುಕೊಡಲು ಇಚ್ಛಿಸದ ಇನ್ನೂರಕ್ಕೂ ಹಿರಿಯ ನ್ಯಾಯವಾದಿಗಳು ಈಗ ಸುಪ್ರೀಂಕೋರ್ಟ್ ಕೊಲಿಜಿಯಂನ ಮೊರೆ ಹೋಗಿದ್ದಾರೆ. ವರ್ಗಕ್ಕೆ ತಡೆ ಸಿಗುತ್ತೋ? ಕಾಯಬೇಕಿದೆ.

ನಾರಾಯಣ ನಾರಾಯಣ!

ಒಬ್ಬ ವ್ಯಕ್ತಿ ಅಬ್ಬಬ್ಬಾ ಅಂದ್ರೆ ಎಷ್ಟು ಬಾರಿ ಕೋವಿಡ್ ಟೆಸ್ಟ್ ಮಾಡಿಸಿಕೊಳ್ಳಬಹುದು? ಒಂದೆರಡು ಬಾರಿ, ಬೇಡ ಹತ್ತು ಬಾರಿ? ನಮ್ಮ ಬಾಲಿವುಡ್‌ನ ಜನಪ್ರಿಯ ಗಾಯಕ ಸೋನು ನಿಗಮ್ ಬರೋಬ್ಬರಿ ಎರಡೂವರೆ ವರ್ಷದಲ್ಲಿ 9,99,999 ಬಾರಿ ಕೋವಿಡ್ ಪರೀಕ್ಷೆಗೆ ಒಳಗಾಗಿದ್ದಾರಂತೆ! ಹಾಗಂತ ಅವರೇ ಟ್ವೀಟ್ ಮಾಡಿದ್ದಾರೆ. ಬಹುಶಃ ಕೋವಿಡ್ ವೈರಸ್ಸನ್ನೇ ಇದಕ್ಕಿಂತ ಸುಲಭವಾಗಿ ಅವರು ಸಹಿಸಿಕೊಳ್ಳಬಹುದಿತ್ತೇನೋ. ನಮ್ಮಲ್ಲಿ ಸೋಂಕಿಗೊಳಗಾಗಿದ್ದರೂ ಟೆಸ್ಟ್‌ಗೆ ಹಿಂದೆ ಮುಂದೆ ನೋಡುವವರ ನಡುವೆ ಸೋನು ಅವರದ್ದು ನಿಜಕ್ಕೂ ಸಾಧನೆಯೇ ಸರಿ. ಸದಾ ಕಾರ್ಯಕ್ರಮಗಳಿಗಾಗಿ ವಿದೇಶ ಪ್ರಯಾಣ ಮಾಡುತ್ತಿರುವ ಅವರಿಗೆ ಅನುಮತಿ ಪಡೆಯಲು ಕೋವಿಡ್ ಟೆಸ್ಟ್ ಅನಿವಾರ್ಯವಾಗಿದೆ,